# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.379-2014** **ಪಿ . ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎಂ.ವೆಂಕಪ್ಪಗೌಡ<br>ಮೈಸೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 28-11-2024.** |

**<u>ಪಾಟೀ ಸವಾಲುಃ  ಪ್ರತಿವಾದಿಗಳ ಪರ ಶ್ರೀ ಹೆಚ್.ಎನ್.ಎಂ ವಕೀಲರಿಂದಃ</u>**

ನಿಪಿ-9 ಅನ್ನು ತಯಾರು ಮಾಡಲು ಛಾಪಾಕಾಗದವನ್ನು ಪಕ್ಷಕಾರರೇ ತಂದಿರುತ್ತಾರೆ. ನಿಪಿ-9 ರಲ್ಲಿ ಕಾಣುವ ಕಂಪ್ಯೂಟರಿನಲ್ಲಿ ಬೆರಳಚ್ಚಾಗಿ ಒಕ್ಕಣೆಯನ್ನು ನಮ್ಮ ಕಚೇರಿಗೆ ಬಂದ ನಂತರ ಮಾಡಲಾಗಿರುತ್ತದೆ. ನಿಪಿ-9 ರಲ್ಲಿರುವ ಒಕ್ಕಣೆಗಳ ಬಗ್ಗೆ ಪಕ್ಷಕಾರರುಗಳು ಮೊದಲೆ ಮಾತನಾಡಿಕೊಂಡು ಬಂದಿದ್ದರು. ಪಕ್ಷಕಾರರು ನಿಪಿ-9 ರಲ್ಲಿ ಬರೆಯಬೇಕಾದ ಒಕ್ಕಣೆಗಳ ಬಗ್ಗೆ ಮೊದಲೇ ಮಾತನಾಡಿಕೊಂಡು ಬಂದಿದ್ದರಿಂದ ಹಣವನ್ನು ಸಹ ಅವರು ಹೊರಗಡೆಯೇ ನೀಡಿದ್ದರೂ  ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಕಚೇರಿಯಲ್ಲಿ ನನ್ನ ಸಮಕ್ಷಮ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪಕ್ಷಕಾರರು ಯಾರು ಎಷ್ಟು ಹಣವನ್ನು ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ದಾಖಲೆಗಳಿಗೆ ನೋಟರಿ ಮಾಡುವ ಸಮಯ ಒಂದು ರಿಜಿಸ್ಟರ್ ಅನ್ನು ನಿರ್ವಹಣೆ ಮಾಡಿರುತ್ತೇನೆ ಎಂದರೆ ಸರಿ. ಅದಕ್ಕೆ

ಸಂಬಂಧಿಸಿದಂತೆ ನನ್ನ ಬಳಿ ಪ್ರತ್ಯೇಕ ಮೊಹರು ಇರುತ್ತದೆ ಎಂದರೆ ಸರಿ. ನಿಪಿ–9 ರಲ್ಲಿ, ಸದರಿ ದಾಖಲೆಯನ್ನು ನಾವು ನಿರ್ವಹಣೆ ಮಾಡುವ ರಿಜಿಸ್ಟರ್ ನಲ್ಲಿನ ದಾಖಲಾತಿ ನಂಬರ್ ಮತ್ತು ರಿಜಿಸ್ಟರ್ ನಂಬರ್ ಅನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ–9 ಅನ್ನು ನಾನು ಬರೆದಿರುವುದಿಲ್ಲ, ಪಕ್ಷಕಾರರೇ ಹೊರಗಡೆ ಮಾಡಿಸಿಕೊಂಡು ಬಂದ ದಾಖಲೆಗೆ ನಾನು ನೋಟರಿ ಮಾತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–9 ರಲ್ಲಿ ಕಂಪ್ಯೂಟರಿನಲ್ಲಿ ಬೆರಳಚ್ಚಾಗಿರುವ ಒಕ್ಕಣೆಯನ್ನು ನಾನು ಟೈಪು ಮಾಡಿಸಿರುವುದಿಲ್ಲ ಮತ್ತು ನಾನು ಅದನ್ನು ಹೊಡೆದಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**